**ಓ ಎಸ್ ನಂಃ 220-15**
**ಡಿ ಡಬ್ಲ್ಯೂ ಃ 1**

**ದಿಃ 22-10-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್ ಸಿ ಕೆ ವಕೀಲರಿಂದ**

38. ನನ್ನ ಹೆಂಡತಿ ನರಸಮ್ಮರವರು 1996 ರಲ್ಲಿ ನನ್ನನ್ನು ಬಿಟ್ಟುಹೋದ ನಂತರ ನಾನು ಈವರೆಗೂ ವಿವಾಹ ವಿಚ್ಛೇದನೆಗೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನರಸಮ್ಮರವರೇ ನನ್ನನ್ನು ಬಿಟ್ಟುಹೋಗಿದ್ದರಿಂದ ನಾನು ವಿವಾಹ ವಿಚ್ಛೇದನೆಗೆ ಅರ್ಜಿ ಸಲ್ಲಿಸಿರುವುದಿಲ್ಲ. 1996 ರ ನಂತರ ನಾನು ಕೂಡ್ಲೂರಿನಲ್ಲಿ ವಾಸಮಾಡುತ್ತಿದ್ದೇನೆ. ನನ್ನ ಸಹೋದರ ಸಹೋದರಿಯರು ನನ್ನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದಾರೆ. 1996 ರ ನಂತರ ನಾನು ಬೆಂಗಳೂರಿನಲ್ಲಿ ವಾಸ ಮಾಡಿಲ್ಲ. ಈ ದಾವೆಯನ್ನು ಹೂಡುವ ಸಮಯದಲ್ಲಿ ನಾನು ಬೆಂಗಳೂರಿನ ಬಾಗಲಗುಂಟೆಯಲ್ಲಿ ವಾಸಮಾಡುತ್ತಿದ್ದೆ ಎಂದರೆ ಸರಿಯಲ್ಲ. ಈ ದಾವೆಯ ನೋಟಿಸು ಬಾಗಲಗುಂಟೆ ವಿಳಾಸಕ್ಕೆ ಬಂದಿದೆ ಎಂದರೆ ಅದು ನನ್ನ ತಂಗಿಯ ಮನೆಯ ವಿಳಾಸ ಎಂದು ಹೇಳುತ್ತಾರೆ. ಬಾಗಲಗುಂಟೆಯಲ್ಲಿ ವಾಸವಿರುವ ನನ್ನ ತಂಗಿಯ ಹೆಸರು ಸಾವಿತ್ರಮ್ಮ ಆಗಿರುತ್ತದೆ. ನನಗೆ ಸೌಭಾಗ್ಯರವರು ಯಾರು ಗೊತ್ತಿಲ್ಲ. ನಾನು 1990 ರಿಂದ ಸೌಭಾಗ್ಯ ಎಂಬುವವರ ಸಂಪರ್ಕದಲ್ಲಿದ್ದೆ ಎಂದರೆ ಸರಿಯಲ್ಲ. ನನ್ನ ಮತ್ತು ಸೌಭಾಗ್ಯರವರ ಅಕ್ರಮ ಸಂಬಂಧದ ಬಗ್ಗೆ ನನ್ನ ಹೆಂಡತಿ ನರಸಮ್ಮರವರು ಪ್ರಶ್ನೆ ಮಾಡಿದ ನಂತರ ನನ್ನ ಮತ್ತು ನರಸಮ್ಮರವರ ಮಧ್ಯೆ ಮನಃಸ್ತಾಪ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಸೌಭಾಗ್ಯರವರ ಜೊತೆ ಸಂಪರ್ಕದಲ್ಲಿ ಬಂದ ನಂತರ ನಾನು ವಾದಿಗಳು ಹಾಗೂ ನರಸಮ್ಮರವರ ಬಗ್ಗೆ ಕಾಳಜಿ ವಹಿಸಲಿಲ್ಲ ಎಂದರೆ ಅವರೇ ಮನೆ ಬಿಟ್ಟು ಹೋಗಿರುತ್ತಾರೆ ಎಂದು ಹೇಳುತ್ತಾರೆ. ಆದ ಕಾರಣ 1996 ರಲ್ಲಿ ನರಸಮ್ಮರವರು ನನ್ನ ವಿರುದ್ಧ ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

39. ನರಸಮ್ಮರವರಿಗೆ ಜೀವನಾಂಶಕ್ಕಾಗಿ ಯಶವಂತಪುರ ಹಾಗೂ ಜಾರಕಬಂಡೆ ಕಾವಲ್ ನಲ್ಲಿರುವ ಎರಡು ಮನೆಗಳನ್ನು ಬಿಟ್ಟಿರುತ್ತೇವೆ. ಈ ಬಗ್ಗೆ ನಾನು ಯಾವ ದಾಖಲೆ ಮೂಲಗಳು ಆ ಎರಡು ಮನೆಗಳನ್ನು ನರಸಮ್ಮರವರಿಗೆ ಬಿಟ್ಟುಕೊಟ್ಟಿಲ್ಲ ಆದರೆ ನರಸಮ್ಮರವರೇ ಸ್ವಾಧೀನವನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿ ಮುಂದುವರೆದು ನರಸಮ್ಮರವರು ಜಿ ಪಿ ಎ ಯನ್ನು ಸೃಷ್ಟಿ ಮಾಡಿಕೊಂಡು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ. 2000 ನೇ ಇಸವಿಯಲ್ಲಿ ಜಿ ಪಿ ಎ ಯನ್ನು ಸೃಷ್ಟಿ ಮಾಡಿ ಆಸ್ತಿಯನ್ನು ಮಾರಾಟ ಮಾಡಿರುವ ವಿಷಯ ಗೊತ್ತಾಗಿರುತ್ತದೆ. ನರಸಮ್ಮರವರು ಜಿ ಪಿ ಎ

ಯನ್ನು ಸೃಷ್ಟಿ ಮಾಡಿ ಆಸ್ತಿಗಳನ್ನು ಮಾರಾಟ ಮಾಡಿದ್ದರ ಬಗ್ಗೆ ನಾನು ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ. ನರಸಮ್ಮ ಮತ್ತು ಅವರ ಮಕ್ಕಳಿಗೆ ಜೀವನಾಂಶಕ್ಕೆ ಬೇಕು ಎಂದು ಯಶವಂತಪುರ ಮತ್ತು ಜಾರಕಬಂಡೆ ಕಾವಲ್ ನಲ್ಲಿರುವ ಮನೆಗಳನ್ನು ಬಿಟ್ಟುಕೊಟ್ಟಿದ್ದು ಆ ಕಾರಣಕ್ಕೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

**40.** ಯಶವಂತಪುರ ಮತ್ತು ಜಾರಕಬಂಡೆ ಕಾವಲ್ ನಲ್ಲಿರುವ ಆಸ್ತಿಗಳಿಗೆ ಎರಡು ಮೂರು ವರ್ಷ ನಾನು ಕಂದಾಯ ಕಟ್ಟಿರುತ್ತೇನೆ. ನನ್ನ ಮಾವ ಮತ್ತು ಬಾಮೈದರು ಯಶವಂತಪುರ ಮತ್ತು ಜಾರಕಬಂಡೆ ಕಾವಲ್ ನಲ್ಲಿರುವ ಆಸ್ತಿಗಳನ್ನು ನನ್ನ ಹೆಸರಿಗೆ ಖರೀದಿ ಮಾಡಿ ಅಲ್ಲಿ ಮನೆಗಳನ್ನು ಕಟ್ಟಲು ಸಹಾಯ ಮಾಡಿದ್ದರಿಂದ ಅವುಗಳು ಅವರದೇ ಆಸ್ತಿಗಳು ಆಗಿದ್ದರಿಂದ ಅವುಗಳನ್ನು ನಾನು ಪುನಃ ನರಸಮ್ಮರವರಿಗೆ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು ಬರೆದುಕೊಟ್ಟ ಜಿ ಪಿ ಎ ಆಧಾರದ ಮೇರೆಗೆ ಆ ಎರಡು ಆಸ್ತಿಗಳನ್ನು ನರಸಮ್ಮರವರು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ವಾದಿಗಳು ಸಂಬಂಧ ಇಲ್ಲ ಎಂದು ಹೇಳುತ್ತಾರೆ. ವಾದಿಗಳು ಮತ್ತು ಪ್ರತಿವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಸಮಾನವಾದ ಹಿತಾಸಕ್ತಿ ಇದೆ ಎಂದರೆ ಸರಿಯಲ್ಲ.

**41.** ವಾದಿಗಳಿಗೆ ಅವರ ವಿದ್ಯಾಭ್ಯಾಸಕ್ಕೆ ಮತ್ತು ಯಾವುದಕ್ಕೂ ನಾನು ತಂದೆಯಾಗಿ ಯಾವುದೇ ಕೊಡುಗೆ ನೀಡಿಲ್ಲ ಎಂದರೆ ಎರಡು ಮನೆಗಳನ್ನು ಬಿಟ್ಟುಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಎರಡು ಮನೆಗಳನ್ನು ಮಾರಾಟ ಮಾಡಿ ಬಂದ ಹಣವನ್ನು ನಾನು ಮತ್ತು ನನ್ನ ಹೆಂಡತಿ ನರಸಮ್ಮರವರು ಹಂಚಿಕೊಂಡಿದ್ದು ವಾದಿಗಳಿಗೆ ಏನು ಕೊಟ್ಟಿಲ್ಲ ಎಂದರೆ ವಾದಿಗಳು ನರಸಮ್ಮರವರ ಜೊತೆ ಇರುತ್ತಿದ್ದರು ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ನಮ್ಮ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಗಳು ಎಂದರೆ ಅವುಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಹೇಳುತ್ತಾರೆ. ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಇತರೆ ಪ್ರತಿವಾದಿಗಳ ಜೊತೆ ಸೇರಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನನ್ನ ತಮ್ಮಂದಿರು ಈ ನ್ಯಾಯಾಲಯದಲ್ಲಿ ಹಾಜರಿದ್ದು ನಾನು ಈ ಮೊದಲು ಸಾಕ್ಷಿ ಹೇಳುವಾಗಲೂ ಸಹ ಅವರುಗಳು ಹಾಜರಿದ್ದರು ಎಂದರೆ ನಿಜ. ನಾನು ವಾದಿಗಳಿಗೆ ಒಟ್ಟು ಕುಟುಂಬದ ಯಾವುದೇ ಆಸ್ತಿಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.